

ಕೇಳಿಕೊಳ್ಳುತ್ತ ಆಕಾಶದ ಕಡೆ ನೋಡುತ್ತಾ ತೋರುಬೆರಳಿನಿಂದ ನನ್ನ ಗಲ್ಲದ ಮೇಲೆ ನಾನೇ ಹೊಡೆದುಕೊಳ್ಳುತ್ತಾ ನಿಂತೆ. ಅವನು ಕೆಲಸಕ್ಕೆ ಅಪ್ಲೈ ಮಾಡಿದ್ದು, ಮೂರು ಕಡೆ ಇಂಟರ್‌ವ್ಯೂ ಬಂದಿದ್ದು ಎಲ್ಲಿ ಸೆಲೆಕ್ಟ್ ಆಗರಬಹುದು ಅನ್ನೋ ಪ್ರಶ್ನೆ ಇರಬಹುದೇ ಎನ್ನಿಸಿತು. 'ಇರಬಹುದು ಇರಬಹುದು. ಅದೇ ಸರಿಯಾದ ಪ್ರಶ್ನೆ. ಎಲ್ಲೋ ಒಂದು ಕಡೆ, ಮೊದಲು ಕೆಲಸ ಅಂತ ಒಂದು ಸಿಕ್ಕಲಿ ಪಾಪ' ಎಂದುಕೊಳ್ಳುತ್ತ ಬೆರಳನ್ನು ಮುಟ್ಟೋ ಮನಸ್ಸು ಮಾಡಿದೆ. ಅಷ್ಟರಲ್ಲಿ ಆತ 'ಏನ್ಸಾರ್, ಏನು ಯೋಚನೆ ಮಾಡ್ತಿದ್ದೀರಿ? ಒಂದು ಬೆರಳನ್ನ ಮುಟ್ಟೋಕೆ ಇಷ್ಟೊಂದು ಯೋಚನೆ ಮಾಡಬೇಕಾ?' ಅಂತ ಕೇಳಿದ. ಆ ಪ್ರಶ್ನೆ ತೂರಿಬಂದ ಸ್ಪೀಡಿಗೆ ನನಗೆ ನಾಚಿಕೆಯಾಗಿ ತಕ್ಷಣ ಮಧ್ಯದ ಬೆರಳನ್ನು ಮುಟ್ಟಿಬಿಟ್ಟೆ. ಬರೀ ಮುಟ್ಟಿದ್ದೇ ಅಲ್ಲ, ನನ್ನ ಮೂರು ಬೆರಳುಗಳಲ್ಲಿ ಹಿಡಕೊಂಡೂಬಿಟ್ಟೆ. ಅವನು? ಅವನ ಬೆರಳನ್ನು ಹಿಡಿದಿದ್ದ ನನ್ನ ಕೈಯನ್ನೇ ದೃಷ್ಟಿಸುತ್ತಾ ಗಹಗಹಿಸಿ ನಗಲು ಪ್ರಾರಂಭಿಸಿದ. ಅವನು ಖುಷಿಯಾದದ್ದನ್ನು ನೋಡಿ ನನಗೂ ಖುಷಿಯಾಯಿತು. ಇನ್ನೊಬ್ಬರ ಸಂತೋಷಕ್ಕೆ ಕಾರಣನಾದರೆ ನಿನ್ನ ಜನ್ಮ ಸಾರ್ಥಕವಾದಂತೆ ಅನ್ನೋ ಖುಷಿವಾಣಿ ನನಗೆ ಕೇಳಿಸಿದಂತಾಯಿತು.

ಕೇಳಿದೆ, 'ಏನಂದುಕೊಂಡಿದ್ದಿರಿ?'.

'ಏನಿಲ್ಲ ಸಾರ್, ನೀವು ವಾಕಿಂಗ್ ಹೋಗೋದನ್ನ ನಾನು ಎರಡು ವರ್ಷದಿಂದ ತಪ್ಪದೇ ನೋಡ್ತಿದ್ದೀನಿ. ಆದರೆ ಅದರ ಪ್ರಯೋಜನ ಮಾತ್ರ ನಿಮಗೆ ಲಭ್ಯವಾದಹಾಗೆ ನನಗೆ ಕಾಣಿಸಲಿಲ್ಲ. ಹಾಗಾಗಿ ಇವತ್ತು ಆ ದೇವರ ಮೇಲೆ ಭಾರ ಹಾಕಿ ಶಾಸ್ತ್ರ ನೋಡಿ ನಿಮ್ಮ ಭವಿಷ್ಯ ತಿಳಿಯೋ ಆಸೆಯಾಯಿತು. ಅದಕ್ಕೇ ಈ ಪರೀಕ್ಷೆ. ನನ್ನ ತೋರುಬೆರಳನ್ನು ಮುಟ್ಟಿದರೆ ತಿಂಗಳಿಗೆ ಐದು ಕೇಜಿಯಂತೆ ತೂಕ ಕಳೆದುಕೊಳ್ಳಲಿ. ಅನಾಮಿಕವನ್ನು ಮುಟ್ಟಿದರೆ ಯಾರು ಏನೇ ತಿಪ್ಪರಲಾಗ ಹಾಕಿದರೂ ತೂಕದಲ್ಲಿ ಏನೂ ವ್ಯತ್ಯಾಸ ಆಗದಿರಲಿ, ಅಕಸ್ಮಾತ್ ಮಧ್ಯದ ಬೆರಳನ್ನೇನಾದರೂ ಮುಟ್ಟಿಬಿಟ್ಟರೆ ತಿಂಗಳಿಗೊಂದು ಕೇಜಿಯಂತೆ ನಿಮ್ಮ ತೂಕ ವೃದ್ಧಿಸುತ್ತಾ ಹೋಗಲಿ ಅಂತಂದುಕೊಂಡು ಕೈ ಚಾಚಿದೆ. ನೀವೂ, ನಾನಲ್ಲ ಸಾರ್, ನೀವೇ, ನಿಮ್ಮ ಕೈಯಾರ ನನ್ನ ಮಧ್ಯದ ಬೆರಳನ್ನು ಮುಟ್ಟಿದಿರಿ' ಅಂದ.

ಅವನ ಮಧ್ಯದ ಬೆರಳನ್ನು ಹಿಸುಕಿ ಹಿಸುಕಿ ಜಜ್ಜಿಬಿಡೋಣ ಅನ್ನೋಷ್ಟರಲ್ಲಿ ಅವನು ಮೆಲ್ಲಗೆ ತನ್ನ ಮಧ್ಯದ ಬೆರಳನ್ನು ಬಿಡಿಸಿಕೊಂಡುಬಿಟ್ಟಿದ್ದ.